(ಶ್ರೀ ಎಂ. ಸಿ. ನರಸಿಂಹನ್)

ಅತ್ತವನ್ನ ಹೊಸದಾಗಿ ಆಫರ ಸಹಕಾರವನ್ನು ತೋರಿಸುವುದಕ್ಕಾಗಿ ತಂದಿದ್ದಾರೆ ಎಂದು ಸರ ಕಾರ ನೋಡುವುದು ಸಾಧುವಾಗುವುದಿಲ್ಲ. ಈ ರೀತಿಯಾಗಿ ಒಂದು ನಿಯಮವಿರಬೇಕು, ಎಂದು ಹೇಳಿದೆಯೇ ಹೊರತು ಬೇರೆನಲ್ಲ.

ನಾನು ಮೊದಲೇ ಅರಿಕೆಯಲ್ಲಿ ಹೇಳಿದೆ. ಕೇರಳದಲ್ಲಿ ಕಮ್ಯೂನಿಸ್ಟ್ ಮಿನಿಸ್ಟ್ರಿ ಇದ್ದಾಗ್ಗೆ ಈ ರೀತಿ ಚುನಾವಣೆ ನಡೆಯಿಸುತ್ತಿದ್ದಾಗ ಯಾವ ಪಕ್ಷವೇ ಆಗಲಿ ತಮ್ಮ ಪಾರ್ಟಿ ಕಡೆ ಒತ್ತಾಯ ಮಾಡಲಿಕ್ಕೆ ಹೋಗುತ್ತಿರಲಿಲ್ಲ. ಇದು ಎಲ್ಲಾ ಪಕ್ಷಗಳಿಗೂ ಅನ್ವಯಿಸುವ ಪ್ರಶ್ನೆ ಯಾಗಿರುವುದರಿಂದ ಈ ಬಗ್ಗೆ ಬಹಳ ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳಬೇಕಾದುದು ಅಗತ್ಯವಿದೆ. ಈ ಪ್ರಜಾ ಸರ್ಕಾರದಲ್ಲಿ ಒಂದು ವೇಳೆ ಪೋಷಿಯಲಿಸ್ಟ್ ಪಾರ್ಟಿ ಅಧಿಕಾರಕ್ಕೆ ಬರುವುದಾದರೆ, ಶ್ರೀಮಾನ್ ಮಲ್ಲಾರಾಧ್ಯ ಅವರಂತಹ ಸ್ನೇಹಿತರು ಅಧಿಕಾರದಲ್ಲಿದ್ದು ಆ ಕಡೆ ಇದ್ದರೆ ಖಂಡಿತವಾಗಿ ಆ ಬಗ್ಗೆ ಒಂದು ಸರಿಯಾದ ನಿರ್ಣಯವನ್ನು ತರುತ್ತಿದ್ದರೆಂದು ನನಗೆ ಗೊತ್ತು. ಆದ್ದರಿಂದ ಈ ಸಂದರ್ಭದಲ್ಲಿ ನನ್ನ ನಿರ್ಣಯದ ಪ್ರಕಾರ ನಡೆಯುವುದು ಅಗತ್ಯ ವಿದೆ. ಎಂಥಾದ್ದನ್ನೂ ಯಾವ ರೀತಿಯಲ್ಲೂ ನೋಡಬೇಕಾದುದೇನೂ ಇಲ್ಲ. ಕೇವಲ ಬಹು ಸರಳವಾದ ನಿಯಮ ನನ್ನ ನಿರ್ಣಯದಲ್ಲಿ ಅಡಗಿದೆ. ಯಾವ ರೀತಿಯ ಪ್ರತ್ಯಾರೋಪಣೆ ಗಳು ಇದರಲ್ಲಿ ನಡೆಯುವುದಿಲ್ಲವೆಂಬ ದೃಷ್ಟಿಯಿಂದ ಇವರು ತಮ್ಮ ಮುಂದಿಟ್ಟಿದ್ದೇನೆ. ಆದ್ದರಿಂದ ನನ್ನ ಸಲಹೆಗಳನ್ನೆಲ್ಲಾ ಸರ್ಕಾರದವರು ಚೆನ್ನಾಗಿ ಪರಿಶೀಲಿಸಿ ಕಾರ್ಯಗತ ಮಾಡುತ್ತಾರೆಂದು ನಂಬಿ ನಾನು ನನ್ನ ನಿರ್ಣಯವನ್ನು ಪೆಡ್ಡಾ ಮಾಡಬೇಕಾಗಿದೆ.

Mr. DEPUTY SPEAKER.—The question is:

"That this Assembly is of the opinion that Ministers should not undertake during the period of two months preceding the last date of polling during the General Elections any propagandist activity in support of candidates in the said General Elections belonging to their own political party or parties provided that this shall not deprive the Ministers of the right to do anything permitted by law in support of their own individual candidature in the General Elections and in their respective constituencies."

The resolution was negatived.

NON-OFFICIAL RESOLUTION *Re*: RENAMING OF MYSORE STATE AS KARNATAKA STATE.

Sri BASANGOWDA (Lingsugur).—Sir, I beg to move:

"That this Assembly is of the opinion that recommendation be made to the Government of India to take necessary steps urgently to change the present name of Mysore State to Karnataka State."

Mr. DEPUTY SPEAKER.—Resolution moved:

"That this Assembly is of the opinion that recommendation be made to the Government of India to take necessary steps urgently to change the present name of Mysore State to Karnataka State."

Sri BASANGOWDA.—Sir...

Sri G. VENKATAI GOWDA.—Sir, a similar resolution was tabled in this House last time. We do not know what happened to it?

Mr. DEPUTY SPEAKER.—That session was adjourned *sine die* and that resolution lapsed.

Sri U. M. MADAPPA.—We have discussed this subject thoroughly and sufficiently for a long time. You may put the resolution to vote to save time.

Mr. DEPUTY SPEAKER.—Let the mover speak.

Sri M. C. NARASIMHAN.—It is not the question of preventing anybody from speaking. This resolution is clearly repetitive in character. Our rules of procedure say that arguments of a repetitive character should not be permitted.

If I were to speak now on this resolution I would be repeating for the third or fourth time the same arguments. This is putting us in a very difficult position. So it is better that you take the vote of the House without any further discussion.

Mr. DEPUTY SPEAKER.—No vote has been taken in the past and so it cannot be repetitive.

Sri M. C. NARASIMHAN.—All the same, the arguments are repetitive.

Mr. DEPUTY SPEAKER.—When a decision is not taken, how can it be repetitive?

Sri M. C. NARASIMHAN.—A decision on the point has nothing to do with the repetitive character of the arguments. A member speaking on the resolution will have to repeat over again the same arguments which he had advanced before. Is it in accordance with the rules of procedure? It is not in accordance with the rules of procedure and parliamentary conventions.

Mr. DEPUTY SPEAKER.—It may not be repetitive when the decision is not taken. Let the Hon'ble Member who has moved the resolution make his remarks.

ಶ್ರೀ ಎ. ಜಿ. ಕೊಡ್ಲಪೇಟಿ.—ಬೇರೆ ಬೇರೆಯಾಗಿ ನಮ್ಮವರು 40-42 ಜನ ನಮ್ಮವರು ಈ ನಿರ್ಣಯವನ್ನು ಕಳುಹಿಸಿದ್ದಾರೆ. ಅವರೆಲ್ಲರೂ ಒಂದೇ ಸಾರಿ ಇದನ್ನು ಮೂವ್ ಮಾಡಿದ್ದಾರೆಂದು ತಿಳಿದುಕೊಳ್ಳಬಹುದೇ? ಅದೇನು ಚರ್ಚೆಯಲ್ಲವೇ? ಅದು ಹೇಗೆ?

Sri V. P. DEENADAYALU NAIDU.—Sir, a specific time was allotted for this.

Apart from that, I would like to know what are the amendments that are before the House.

Mr. DEPUTY SPEAKER.—No amendments.

Sri V. P. DEENADAYALU NAIDU.—With great respect let me submit there are 3 amendments. I have also taken copies of the amendments from Office. Let them be brought before the House.

Mr. DEPUTY SPEAKER.—I will find out. In the meanwhile let the mover offer his remarks.

†ಶ್ರೀ ಬಸನಗೌಡ.—ಅಧ್ಯಕ್ಷರೇ, ಈ ಗೊತ್ತುವಳಿಯನ್ನು 1957-59ನೇ ಬಡೆತ್ ಅಧಿವೇಶನದಲ್ಲಿಯೂ ಬಹು ಜನರಿಂದ ಈ ಸಭೆಯಲ್ಲಿ ಚರ್ಚೆ ಮಾಡಬೇಕೆಂದು ಕಳುಹಿಸಲ್ಪಟ್ಟಿತ್ತು. ಅಲ್ಲದೆ 1956ನೇ 1ನೇ ತಾರೀಖು ಕನ್ನಡಿಗರ ಕನಸು ಎನ್ನುವುಹಾದ್ದು ನಮ್ಮ ಕನ್ನಡ ನಾಡಿನ ವಿಶಾಲ ಕೀರ್ತಿ ಸಂಭವಿಸಿತು ಎಂದು ನಾನು ಭಾವಿಸುತ್ತೇನೆ. ಆದ್ದರಿಂದಲೇ ಸರ್ಕಾರದವರು ಮುಖ್ಯವಾಗಿ ಭಾಷಾನಿಯ್ಯತಿ, ಆರ್ಥಿಕ ಪರಿಸ್ಥಿತಿ, ಸಾಮಾಜಿಕ ಪರಿಸ್ಥಿತಿ ಮತ್ತು ರಾಜಕೀಯ ಪರಿಸ್ಥಿತಿಗನುಗುಣವಾಗಿ ನಮ್ಮ ಭಾರತದಲ್ಲಿನ ಕೆಲವು ರಾಜ್ಯಗಳನ್ನು ವರ್ಷೇ ವರ್ಷೇ ಸೇರಿಸಿಕೊಂಡರು. ಈಗ ಅವೆಲ್ಲವನ್ನೂ ಸೇರಿಸಿದ ಮೇಲೆ ಈ ಮೈಸೂರು ರಾಜ್ಯವನ್ನು ಕರ್ನಾಟಕ ರಾಜ್ಯವೆಂದು ಹೋಷಿಸಬೇಕಾಗಿರುವೆಯೆಂದು ಅನೇಕರ ಅಭಿಪ್ರಾಯವಾಗಿದೆ. ಸಂಸ್ಥಾನದ ಹೆಸರನ್ನು ಮೊದಲಿನಂತೆ ಕರ್ನಾಟಕ ಎಂದು ಕರೆಯಬೇಕೆಂದು ಅನೇಕರ ಅಭಿಪ್ರಾಯ ಬಂದಂತಾಗಿದೆ. ಈ ವಿಶಾಲ ಮೈಸೂರಿಗೆ ಈಗ ಅನೇಕ ಭಾಗಗಳು ಅದರಲ್ಲೂ ಕನ್ನಡ ನಾಡಿನ ಭಾಗಗಳೇ ಕಾಣುವೆ. ಕೆಲವು ತಮ್ಮ ಅಭಿಪ್ರಾಯದಲ್ಲಿ ಮೈಸೂರು ಎಂಬ ಹೆಸರೇ ಇರಬೇಕೆಂತಲೂ ಮತ್ತೆ ಕೆಲವರು ಕರ್ನಾಟಕವೆಂಬ ಹೆಸರೇ ಇರಬೇಕೆಂತಲೂ ಸೂಚಿಸಿದ್ದಾರೆ. ಎಲ್ಲ ಭಾಗಗಳೂ ಸೇರಿ ಈಗ ಕನ್ನಡನಾಡು ಆಗಿದೆ. ಅದರಲ್ಲಿ ಮೈಸೂರು ಸಹ ಸೇರಿದೆ ಎಂದು ನಾನು ಭಾವಿಸುತ್ತೇನೆ. ಯಾವ ರೀತಿ ಸಮುದ್ರದಲ್ಲಿ ದೊಡ್ಡ ಹೊಳೆಗಳು, ಕೊಳ್ಳಿಗಳು ಕೂಡುತ್ತವೋ ಹಾಗೆ ಕನ್ನಡನಾಡಿನಲ್ಲಿ ಎಲ್ಲಾ ಚಿಕ್ಕ ಚಿಕ್ಕ ರಾಜ್ಯಗಳು ಕೂಡಿಕೊಂಡಿವೆ. ಮತ್ತು ಇವತ್ತಿನ ದಿವಸ ಒಂದು ಹೊಸ ರಾಜ್ಯ ನಿರ್ಮಾಣವಾಗಿದೆ. ಅದಕ್ಕೆ ನವು ಹೊಸ ಹೆಸರನ್ನು ಕೊಡಲು ಬಯಸುತ್ತೇವೆ. ಹಿಂದಿನ ಇತಿಹಾಸವನ್ನು ತೆಗೆದು ನೋಡಿದರೆ ಕನ್ನಡನಾಡಿಗೆ ಕರ್ನಾಟಕವೆಂದು ಹೆಸರು ಯಾವಾಗಲೋ ವರ್ಣನೆಯಾಗಿ ಬಂದಿದೆ. ನಾವು ಸೇರುವಾಗ ಈ ರಾಜ್ಯಕ್ಕೆ ಕನ್ನಡನಾಡು ಎಂಬ ಹೆಸರೂ ಸಹ ಇದ್ದುದರಿಂದ ಕರ್ನಾಟಕವೆಂಬ ಹೆಸರು ವರ್ಣನೆಯಾಗುವುದು ಉಚಿತವೆಂಬುದಾಗಿ ತಿಳಿದಿದ್ದೆವು. ಆ ಪ್ರಕಾರ ಈ ರಾಜ್ಯಕ್ಕೆ ಆ ಹೆಸರನ್ನು ಹಿಂದೆಯೇ ವರ್ಣನೆ ಮಾಡಿದ್ದರು. ಇದಕ್ಕೆ ಎಷ್ಟೋ ಉದಾಹರಣೆಗಳನ್ನು ಕೊಡಬಹುದು. ಈ ಕಾರಣಗಳಿಂದ ಇದನ್ನು ಕರ್ನಾಟಕವೆಲ್ಲವೆಂದು ಯಾರೂ ಹೇಳುವುದಿಲ್ಲ. ಇದು ಸರ್ವಸಮ್ಮತವಾದುದು. ಈ ರಾಜ್ಯಕ್ಕೆ ಬಂದು ಸುಮಾರು 4½ ವರ್ಷಗಳಾದರೂ ಕೂಡ ಮೈಸೂರು ಎಂಬ ಹೆಸರನ್ನು ನಾವು ಕರೆಯುತ್ತಿದ್ದೇವೆ. ಅಲ್ಲದೆ ಈಗ 4½ ವರ್ಷಗಳಿಂದಲೂ ನಾವೆಲ್ಲರೂ ಒಂದಾಗಿ ಕನ್ನಡಿಗರನ್ನೆಲ್ಲಾ ಒಂದು ಕಡೆ ಸೇರಿಸಲಿಕ್ಕೆ ಹೊರಟಿದ್ದೇವೆ. 1959ರಿಂದಲೂ ಕನ್ನಡ ರಾಜ್ಯಗಳೆಲ್ಲ ಸೇರಿಸಿಕೊಂಡು ಬಂದಿವಾರೆ. ಇನ್ನು ಕೆಲವು ಕನ್ನಡ ರಾಜ್ಯಗಳು ಸೇರುವ ನಿರೀಕ್ಷೆಯೂ ಇವೆ. ಆದೂ ಅಲ್ಲದೆ ಈಗ ಈ ಸಭೆಯ ವಾತಾವರಣ ಚೆನ್ನಾಗಿದೆ. ಆದ್ದರಿಂದ ಎಲ್ಲರೂ ಈ ನಿರ್ಣಯವನ್ನು ವಿಶಾಲ ಹೃದಯದಿಂದ ಮತ್ತು ಸಹೋದರ ಭಾವನೆಯಿಂದ ಒಪ್ಪಿಕೊಳ್ಳಬೇಕೆಂದು ನಾನು ಹೇಳುತ್ತೇನೆ.

ಇಲ್ಲದೇ ಹೋದರೆ ನಮ್ಮ ಸಂಸ್ಕೃತಿ, ನಮ್ಮ ಪರಂಪರೆ ಆರ್ಥಿಕ ಪರಿಸ್ಥಿತಿ, ನಮಾಜ ರಚನೆ ಇವೆಲ್ಲವನ್ನು ಹಿಂದಿನಿಂದ ಸಂಘಟನೆಯಬೇಕೆಂದು ಏನು ಹೇಳಿಕೊಂಡು ಬಂದಿದ್ದೆವೋ ಅವುಗಳನ್ನು ಸಾಧಿಸಲು ಕಷ್ಟ. 2 ಕೋಟಿ 30 ಲಕ್ಷ ಜನರ ಬಹು ಆಕಾಂಕ್ಷೆಗಳೆನಿದೆಯೋ, ಅವುಗಳನ್ನು ಈಡೇರಿಸಲಿಲ್ಲ ಎಂಬ ಅಪವಾದನೆಗೆ ಗುರಿಯಾಗಲು ಕಾರಣವಾಗುತ್ತೆವೆಂದು ಧೈರ್ಯವಾಗಿ ಹೇಳುತ್ತೇನೆ. ನಮ್ಮ ಹಿರಿಯರ ಪ್ರಯತ್ನದಿಂದ ಸ್ವಾತಂತ್ರ್ಯ ಸಿಕ್ಕಿ 13ವರ್ಷವಾದರೂ ಕೂಡ, ನಮ್ಮ ರಾಜ್ಯದ ಹೆಸರನ್ನು ಬದಲಾಯಿಸುವ ಸಾಮರ್ಥ್ಯವಿಲ್ಲವೆಂದರೆ ಜನ ಅಸಮ್ಮತಿ ಪಡುತ್ತಾರೆ. ಬ್ರಿಟಿಷರ ಕಾಲದಲ್ಲಿ ಏನೋ ಕಾರಣವಿಂದ ಒಡೆದು ಕನ್ನಡ ಪ್ರದೇಶದ ಭಾಗಗಳು ಉಳಿದು, ಈಗ ಒಂದು ರಾಜ್ಯದೊಳಗೆ ಸೇರಿಸಲಾಗಿದೆ. ಈ ರೀತಿ ನಮ್ಮ ಒಂದು

ಕರ್ನಾಟಕದ ಭಾಗ ಹರಿದು ಹಂಚಿ ಹೋಗಿದ್ದು, ಈಗ ಒಂದಾಗಿರಬೇಕಾಗಿದೆ ಎಂಬ ಭಾವನೆ ಮಹತ್ವವಾದುದು. ಈ ಭಾವನೆಗೆ ಅನುಗುಣವಾಗಿ ಒಂದು ಹೆಸರನ್ನಿಡಲಿ. ಹೀಗೆ ನಮ್ಮ ಮಕ್ಕಳಿಗೆ, ಪ್ರಾಣಿಗಳಿಗೆ, ನಾಯಿಗಳಿಗೆ, ನಹ, ಒಂದು ಸುಂದರವಾದ, ಹ್ರೇಮಕರವಾದ ಹೆಸರನ್ನಿಡುತ್ತೇವೆಯೋ, ಹಾಗೆಯೇ ನಮ್ಮ ಹೊಸರಾಜ್ಯವನ್ನು ಸ್ವಾಭಾವಿಕವಾಗಿ ಕರ್ನಾಟಕ ವೆಂದು ಕರೆಯುವ ಯಾವ ಅಡ್ಡಿಯೂ ಇಲ್ಲ.

ಶ್ರೀ ಎಂ. ಜಿ. ನರಸಿಂಹೇಗಾಡ.— ಕರ್ನಾಟಕವೆಂದು ಹೆಸರಿಟ್ಟರೆ ಅನುಕೂಲವೇನು ? ಮೈಸೂರು ಎಂದು ಹೇಳುತ್ತಿರುವುದರಿಂದ ಆಗುತಿ ರುವ ಅನುಕೂಲಗಳೇನು ಎಪರಿನುತ್ತೀರ?

Sri C. M. ARUMUGHAM.—In the Third Five Year Plan you will get more money if you change the name. That is all.

ಶ್ರೀ ಬಸನಗೌಡ.— 'ಕರ್ನಾಟಕ' ಎಂಬ ಶಬ್ದಕ್ಕೆ ಇಂದು ಇತಿಹಾನವಿದೆ. ಅದನ್ನು ನಾವು ಆಲೋಚನೆ ಮಾಡಿ ನೋಡಿ ಅದಕ್ಕೆ ಅನುಗುಣವಾಗಿ, ಮತ್ತು ಒಂದು ಸಂಸ್ಕೃತಿಯ ಸಂಘಟನೆ ಸಮಾಜರಚನೆ ಮತ್ತು ಭೌಗೋಳಿಕ ನಕಾತಿಯ ದೃಷ್ಟಿಯಿಂದಲೂ ''ಕರ್ನಾಟಕ'' ಎಂಬುದಾಗಿ ರಾಜ್ಯದ ಹೆಸರನ್ನು ಬದಲಾಯಿಸುವ ಅವಶ್ಯಕತೆ ಇದೆ. ''ಮೈಸೂರು'' ಎಂದರೆ ಸಂಸ್ಥಾನ ವೆಂಬ ಭಾವನೆ ಬರುತ್ತದೆ ! ''ಕರ್ನಾಟಕ'' ವೆಂದರೆ ಯಾವ ಭಾವನೆ ಬರುತ್ತದೆಯೋ, ಆ ಭಾವನೆ ಬರುವುದಿಲ್ಲ. ಭಾರತದ ಇತರ ರಾಜ್ಯಗಳಲ್ಲಿ ಕೂಡ ಆ ರಾಜ್ಯದ ಭಾಷೆಗಳಿಗೆ ಅನು ಗುಣವಾದ ಹೆಸರನ್ನು ಇಟ್ಟಿದ್ದಾರೆ. ಮೊದಲು ಬೊಂಬಾಯಿ ರಾಜ್ಯವೆಂದಿದ್ದು ಮಹಾ ರಾಷ್ಟ್ರವೆಂದು ಏಕೆ ಆಯಿತು ? ಆ ಮೇಲೆ ಗುಜರಾತು ಏಕೆ ಆಯಿತು ? ಹೈದರಬಾದ್ ಎಂದಿ ದ್ದುದು, ಆಂಧ್ರವೇಕಾಯಿತು ? ಮದ್ರಾಸನ್ನು ತಮಿಳುನಾಡು ಎಂದು ಕರೆಯಬೇಕೆಂದು ಒಂದು ನಿರ್ಣಯ ಪಾನು ಮಾಡಿಕೊಂಡಿದ್ದಾರೆ. ಈ ಹೆಸರುಗಳಲ್ಲಿ ಒಂದು ಅರ್ಥವಿದೆ, ಅರ್ಥ ವಿಲ್ಲದೆ ಯಾರೂ ಮಾಡಿಲ್ಲ. ರಾಜ್ಯ ಗಳಿಗೆ ಸ್ವಾಭಾವಿಕವಾದ ಹೆಸರನ್ನು ಇಡುವುದನ್ನು ಅಲ್ಲುಗಳೆಯುವಂತಿಲ್ಲ. ಕೇರಳ ಎಂದು ಏಕೆ ಹೆಸರಿಟ್ಟುಕೊಂಡರು—ಟ್ರಾವಂಕೂರು ರಾಜ್ಯವೆಂದು ಏಕೆ ಹೆಸರಿಡಲಿಲ್ಲ ? ಬೆಂಗಾಳ್, ಪಂಜಾಬ್ ಮತ್ತಿತರ ಎಲ್ಲಾ ಕಡೆ ನೋಡಿದರೂ ಇತಿಹಾಸ ಮತ್ತು ಭಾಷಾವಾರು ಆಧಾರದಮೇಲೆ ರಾಜ್ಯಗಳ ಹೆಸರು ಇಡಲ್ಪಟ್ಟಿವೆ.

ಶ್ರೀ ಎಂ. ಜಿ. ನರಸಿಂಹೇಗಾಡ.—ಎರಡೆನರುಗಳನ್ನು ಇಟ್ಟುಕೊಳ್ಳೋಣ—ಮೈಸೂರು ಮತ್ತು ಕರ್ನಾಟಕವೆಂದು ಬೇರೆ ಬೇರೆಯಾಗಿ ಬೈಫರ್‌ಕೇಟ್ ಮಾಡಬೇಕಾಗುತ್ತದೆ.

ಶ್ರೀ ಬಸನಗೌಡ.—ಈಗ ನ್ಪಲ್ಪ ಒಂದೆರಡು ಉದಾಹರಣೆಗಳನ್ನು ಕೊಡುತ್ತೇನೆ. ವಿಜಯ ನಗರ ಸಾಮ್ರಾಜ್ಯವನ್ನು ಸ್ಥಾಪನೆ ಮಾಡಿದಂಥ ವಿದ್ಯಾರಣ್ಯರಿಗೆ ಕರ್ನಾಟಕ ಸಿಂಹಾಸನಾಧೀಶ್ವರ ಎಂಬ ಅಂಕಿತ ವನ್ನು ಕೊಟ್ಟು ಪ್ರಶಂಶಿನರಾಗಿವೆ ! ಕರ್ನಾಟಕವ ರಮಾರಮಣ ಎಂಬ ಬಿರುದು ವಿಜಯನಗ ರದ ರಾಜರಿಗಿದೆ. ಮೈಸೂರು ಮಹಾರಾಜರನ್ನು ಕರ್ನಾಟಕ ಸಿಂಹಾಸನಧಾಧೀಶ್ವರ ಎಂದು ಕರೆಯುತ್ತೇವೆ. ಇವೆಲ್ಲಾ ಅರ್ಥವಿಲ್ಲದ ಹೆಸರುಗಳಲ್ಲಿ ನಮ್ಮ ಮಹಾರಾಜರು ಒಮ್ಮೆ ಬಾಷಣಮಾಡಿದ ನಂದರ್ಭದಲ್ಲಿ ಕರ್ನಾಟಕ ರಾಜ್ಯ ತಮ್ಮ ಕಾಲದಲ್ಲಿ ಸ್ಥಾಪನೆಯಾಯಿ ತೆಂದು ಹೆಮ್ಮೆ ಪಟ್ಟುಕೊಂಡು ಹೇಳಿದ್ದಾರೆ ಆದ್ದರಿಂದ ಅವರುಕೂಡ ''ಕರ್ನಾಟಕ'' ವೆಂಬ ಹೆಸರಿಗೆ ಒಪ್ಪಿದಹಾಗೆ ಆಗಿದೆ. ಸ್ವಾಭಾವಿಕವಾದ ಹೆಸರಿಡುವುದನ್ನು ಬಿಟ್ಟು ಹುಟದಿಂದ ''ಮೈಸೂರು'' ಎಂಬ ಹೆಸರೇ ಮುಂದುವರೆಯಲಿ ಎಂದು ಹೇಳುತ್ತಿದ್ದೀರ. ಸಂಪೂರ್ಣ ಆತ್ಮ ಪರೀಕ್ಷೆ ಮಾಡಿಕೊಂಡರೆ ತಮ್ಮ ಮನನ್ನೂ ''ಕರ್ನಾಟಕ'' ವೆಂದು ಕರೆಯುವುದಕ್ಕೆ ಒಪ್ಪುತ್ತದೆ ವಿಶಾಲವಾದ ರಾಜ್ಯವನ್ನು ಎಲ್ಲ ಕಡೆಯ ಕನ್ನಡ ಪ್ರದೇಶಗಳಿಂದ ಕಟ್ಟಿದ್ದೇವೆ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಸ್ಪೀಡ್ ಆರ್ಗನೈಜೇಶನ್ ಆದ ಕಾಲದಲ್ಲಿ ಏಕೆ ನೀವು ಚಳುವಳಿ ನಡೆಸಲಿಲ್ಲ ? ಈಗ ಏಕೆಂದು ಮಾಡುತ್ತೀರ ?

ಉಪಾಧ್ಯಕ್ಷರು.—ಆರ್ಡರ್, ಆರ್ಡರ್. ಅವರು ಯೀಲ್ಡ್ ಆಗಿದ್ದಾಗ ಮುಕ್ಕಣ್ಣತ್ತನವರು ಕಡೆ ಮಾತನಾಡುತ್ತಾರೆ ?

ಶ್ರೀ ಬನವಗಾಡ.—ಈ ನಮ್ಮ ಹೊಸ ರಾಜ್ಯ ನಿರ್ಮಾಣವಾದ ಕಾಲಕ್ಕೇ ಕರ್ನಾಟಕ ವೆಂಬ ಹೆಸರಿಡಬೇಕೆಂದು ಚರ್ಚೆಯಾದದ್ದನ್ನು ಪೇಪರಿನಲ್ಲಿ ಓದಿದ್ದೇನೆ. ಆ ಕಾಲಕ್ಕೆ ಅಡ್ಡಿ ಆಡಚಣೆಗಳು, ಬಂದು ಹೆಸರು ಬದಲಾಯಿಸುವ ನೂಡನೆಯನ್ನು ಮುಂದಕ್ಕೆ ಹಾಕರಾಯಿತು. ಇದ್ದ ಹೇಸರನ್ನೇ ಮುಂದುವರಿಸಿಕೊಂಡ, ಮುಂದೆ ಶಾಂತಿ ವಾತಾವರಣ ಹುಟ್ಟಿಸಿಕೊಂಡು ಯೋಚನೆ ಮಾಡೋಣವೆಂದು, ಇವತ್ತಿನ ದಿವಸದವರೆಗೂ ಕರ್ನಾಟಕವೆಂಬ ಹೆಸರಿದ್ದು ನಿರ್ಣಯ ಹಾಗೆಯೇ ಬಂದಿದೆ. ನಮ್ಮ ರಾಜ್ಯದ ಎಷ್ಟೇ ರಾಜಕೀಯ ಪಕ್ಷಗಳ, ಸೇವಾ ಸಂಘಗಳ ಹೆಸರುಗಳನ್ನು ಸ್ವಲ್ಪ ನೋಡಿಕೊಂಡರೆ, ಅಷಗಳು ಕರ್ನಾಟಕವೆಂದೇ ಪ್ರಾರಂಭ ವಾಗುವುವು ಕರ್ನಾಟಕ ಗಾಂಧಿ ಸೇವಾ ಸಂಘ, ಕರ್ನಾಟಕ ಪ್ರಾಂತೀಯ ಜನ ಸಂಘ ಕರ್ನಾಟಕ ಸೋಶಿಯಲಿಸ್ಟ್ ಪಾರ್ಟಿ, ಕರ್ನಾಟಕ ಪ್ರಜಾ ಸೋಶಿಯಲಿಸ್ಟ್ ಪಾರ್ಟಿ ಎಂಬು ದಾಗಿ ಏಕೆ ಕರೆದುಕೊಳ್ಳುತ್ತಾರೆಯೋ ಯೋಚಿಸಬೇಕು. ಅದಕ್ಕೆ ಉತ್ತರವನ್ನೂ ಇಲ್ಲ. ಹಾಗೆ ಕರೆದುಕೊಳ್ಳದೆ ವಿಧಿಯಿಲ್ಲ. ಕರೆಯದಿದ್ದರೆ ಸರಿಯಾದ ಭಾವನೆ ಬರುವುದಿಲ್ಲ ಈ ಸಂಸ್ಥಾನದ ಕಾಂಗ್ರೆಸ್ಸಿಗೆ ಕೆ. ಪಿ. ಸಿ. ಸಿ. ಎಂದು ನಾಮಕರಣವಾಗಿತ್ತು. ಮೈಸೂರು ಸಂಸ್ಥಾನ ದವರು ಆಮೇಲೆ ಬೇರೆ ಮಾಡಿಕೊಂಡರು. ಮೊದಲು ಕೆ. ಪಿ. ಸಿ. ಸಿ. ಎಂದು ಈ ಕಾರಣ ದಿಂದಲೇ ಹೆಸರಿಡರಾಗಿತ್ತು.

ಶ್ರೀ ಎಂ. ಸಿ. ನರಸಿಂಹ.—ಕರ್ನಾಟಕ ಪಿ. ಸಿ. ಸಿ. ಕೇವಲ ಇಂಟೆಗ್ರೇಡ್ ಏರಿಯಾ ದಲ್ಲಿ ಮಾತ್ರವಿತ್ತು.

ಶ್ರೀ ಬನನಗಾಡ.—ಅದು ಮೈಸೂರು ಒಳಗೊಂಡಿತ್ತು.

ಡಾ. ಸರ್ದಾರ್ ಬಿ. ಕೆ. ನಾಗೂರ್.—ಹಳೆಯ ಮೈಸೂರು ಕೂಡ ಅದರಲ್ಲಿ ಇತ್ತು.

ಶ್ರೀ ಬನನಗೌಡ.—ಮೈಸೂರು ಅದರಲ್ಲಿ ಕೂಡಿಕೊಂಡಿತ್ತು. ಸಾಹಿತ್ಯ ಪರಿಷತ್ತು ಕೂಡ ಕರ್ನಾಟಕವೆಂದು ಕರೆಯುವ ನೂಡನೆಗೆ ಬೆಂಬಲ ಕೊಟ್ಟುಕೊಂಡು ಬಂದಿದೆ ಶ್ರೀ ಕೆ. ವಿ. ಪುಟ್ಟಪ್ಪನವರೂ ಹಿಂದೆ ಧಾರವಾಡದಲ್ಲಿ ಕರ್ನಾಟಕವೆಂಬ ಹೆಸರನ್ನಿಡಬೇಕೆಂದು ಹೇಳಿದ್ದಾರೆ. ಉಡುಪಿಯಲ್ಲಿ ಮೊನ್ನೆ ನೆರೆದ್ದ ಕರ್ನಾಟಕ ಸಾಹಿತ್ಯ ಪರಿಷತ್ ಸಮ್ಮೇಳನದಲ್ಲಿ ಕೂಡ ಶ್ರೀ ಅ. ನ. ಕೃಷ್ಣರಾಯರು ''ಕರ್ನಾಟಕ'' ವೆಂಬ ಹೆಸರು ಈ ರಾಜ್ಯಕ್ಕೆ ಆದಷ್ಟು ಬೇಗ ಬರಲ ಎಂದು ಹಾರೈಸಿ ಇದ್ದಾರೆ. ಕರ್ನಾಟಕ ಸಾಹಿತ್ಯ ಪರಿಷತ್ತಿಗೂ ಒಂದು ದೊಡ್ಡ ಚರಿತ್ರೆ ಇದೆ.

ಶ್ರೀ ಎಂ. ಸಿ. ನರಸಿಂಹ.—ಎಂ. ಪಿ. ಸಿ. ಸಿ. ಯಲ್ಲಿ ಏಕೆ ಒಂದು ಸ್ಪಷ್ಟ ನಿರ್ಣಯವನ್ನು ಏಕೆ ಸ್ವೀಕರಿಸಬಹುದು.

ಶ್ರೀ ಬನನಗೌಡ.—ಎಂ. ಪಿ. ಸಿ. ಸಿ. ಅರಸೀಕರೆ ಸ್ಟೇಶನ್ನಿನಲ್ಲಿ ಒಂದು ಗೊತ್ತುವಳಿ ಯನ್ನು ಪಾನು ಮಾಡಿಕೊಂಡಿದ್ದಾರೆ. ಕಲವು ಕಾರಣಗಳಿಂದಾಗಿ ಅದು ಹಾಗೆಯೇ ಉಳಿದು ಕೊಂಡು ಹೋಗಿತ್ತು. ಅದಕ್ಕೆ ನವರೂಪ ಕೊಡಬೇಕೆಂದು ರೆಸಲ್ಯೂಶನ್ ಆಗಿದೆ. ಭಿನ್ನಾಭಿ ಪ್ರಾಯಗಳು ಇರುತ್ತವೆ ! ಅವುಗಳನ್ನು ಸರಿಪಡಿಸಬೇಕು ಒಮ್ಮತದಿಂದ ಮಾಡಿದರೆ ಒಳ್ಳೆಯ ದೆಂದು ಕಾಡಿದ್ದಾಯಿತು. ಬರಿ ಮೆಜಾರಿಟಿ ತೀರ್ಮಾನವಾದರೆ ! ಆದಷ್ಟು ಒಮ್ಮತದಿಂದ ಈ ಕೆಲಸ ಮಾಡಬೇಕೆಂದು ಅಭಿಪ್ರಾಯ ಹೊಂದಿದ್ದೇವೆ. ಆವಾಗ ದೇಶಕ್ಕೂ ಉಪಯೋಗ ವಾಗುತ್ತದೆ. ಜನತೆಗೂ ಉಪಯೋಗವಾಗುತ್ತದೆ. ಈಗೆ ನಾವೆಲ್ಲರೂ ಒಂದು ಒಮ್ಮತದಿಂದ ಏನೇ ಒಂದು ಕೆಲಸ ಮಾಡಲಿ ಅದು ನಮಗೆ ಎಲ್ಲರಿಗೂ ಸಮಾಧಾನವಾಗಿರುತ್ತೆ, ಜನರಿಗೂ ಸಮಾಧಾನವಾಗುತ್ತೆ. ಅದಕ್ಕಾಗಿ ತಾವೆಲ್ಲರೂ ಈ ತರಾವನ್ನು ಬಹಳ ವಿಶಾಲ ದೃಷ್ಟಿಯಿಂದ ನೋಡಿ ಸರ್ವರೂ ಒಮ್ಮತದಿಂದ ಇದನ್ನು ಪಾಸ್ ಮಾಡಿಸಬೇಕೆಂತ ಕೇಳಿಕೊಳ್ಳುತ್ತೇನೆ.

ಕಮ್ಮಟ್ಟಿ ಇಲ್ಲಿ ಕೆಲವರು ಏನೋ ಒಂದು ಹಿಂದಿನ ಭಾವನೆಯಿಟ್ಟುಕೊಂಡು ಹಿಂದಿನ ಹೆಸರನ್ನೇ ಮುಂದುವರಿಸೋಣ ಎಂದರೆ ಅದರಿಂದ ನಾವು ಬಹಳ ತಪ್ಪುಮಾಡಿದ ಹಾಗಾಗುತ್ತದೆ. ಇದೇ ಬೆಂಗಳೂರು ನಗರದಲ್ಲಿ ಹೊರಡುತ್ತಿರುವ ಸಂಯುಕ್ತ ಕರ್ನಾಟಕ, ಪ್ರಜಾವಾಣಿ ಮತ್ತು ತಾಯಿನಾಡು–ಈ ದಿನ ಪತ್ರಿಕೆಗಳೆಲ್ಲ 1952 ರಲ್ಲೇ ಈ ಠರಾಪಿನಲ್ಲಿ ನಾನೀಗ ಏನು ಅಭಿಪ್ರಾಯ ಸೂಚಿಸಿದ್ದೇನೋ ಅದನ್ನು ಈ ಪತ್ರಿಕೆಗಳೆಲ್ಲ 1952ರಲ್ಲೇ ಒಪ್ಪಿಕೊಂಡಿರುತ್ತವೆ. ಈ ವಿಚಾರದಲ್ಲಿ P. S. P. ಪಾರ್ಟಿಯವರೂ ಸಹ ಈಗಾಗಲೇ ಒಂದು ನಿರ್ಣಯವನ್ನು ಪಾಸ್ ಮಾಡಿ ಈ ಠರಾವನ್ನ ಅಂಗೀಕರಿಸಬೇಕಂತ ತೀರ್ಮಾನ ಮಾಡಿಕೊಂಡಿದ್ದಾರೆ.

ಶ್ರೀ ಎಂ. ಸಿ. ನರಸಿಂಹ (ಕೆ. ಜಿ. ಎಫ್).—ಆದರೆ ಈಗ ನಿಮ್ಮ ಪಾರ್ಟಿಯವರೇ ಈ ಠರಾವಿಗೆ ವಿರುದ್ಧವಾಗಿ ತಿದ್ದುಪಡಿ ಕಳುಹಿಸಿದ್ದಾರಲ್ಲ ?

ಶ್ರೀ ಬಸನಗೌಡ.—ಅದೂ ಬರಲಿ. ವಿಚಾರ ಮಾಡೋಣ. ಒಪ್ಪತಕ್ಕದ್ದಿದ್ದರೆ ಒಪ್ಪೋಣ. ಆ ವಿಚಾರದಲ್ಲೂ ನಾವು ಮುಂದೆ ಬಂದು ತೀರ್ಮಾನಕ್ಕೆ ಬರಲೇಬೇಕಾಗಿದೆ. ನೋಡೋಣ.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—S. R. C. ಬಂದಿದ್ದ ಕಾಲಕ್ಕೆ ಈ ಹೊಸ ರಾಜ್ಯಕ್ಕೆ ಕರ್ನಾಟಕ ಎಂಬ ಹೆಸರಿಡಲೇಬೇಕು ಎಂತ ಆಗ ಏಕೆ ನೀವು ಅಜಿಟೇಟ್ ಮಾಡಲಿಲ್ಲ ?

ಶ್ರೀ ಎ. ಜೆ. ಡೊಡ್ಡಮೇಟಿ.— S. R. C. ರಿಪೋರ್ಟಿನ ಚರ್ಚೆಕಾಲದಲ್ಲಿ ಇದನ್ನೆಲ್ಲಾ ಹೇಳಿ ಆಗಿದೆ. ಫಸ್ಟ್ ಡಿಕ್ಲರೇಷನ್ನಿನಲ್ಲೂ ಈ ವಿಚಾರವನ್ನು ಹೇಳಿದೆ.

ಶ್ರೀ ಬಸನಗೌಡ.—ನಮ್ಮ ಹಿಂದಿನ ಇತಿಹಾಸಗಳಲ್ಲಿ ಕೆಲವನ್ನು ತೆಗೆದು ನೋಡಬಹುದು ಅದರಲ್ಲಿ ಕೆಲವು ರಾಷ್ಟ್ರಗಳ ಇತಿಹಾಸವನ್ನು ನೋಡಿದರೆ–ಅಂದರೆ ಈ ಹಿಂದೆ ಇಲ್ಲ ರಾಜ್ಯವಾಳಿದಂಥ ಗಂಗರಸರ, ರಾಷ್ಟ್ರಕೂಟರ, ಹಾಗೂ ಚಾಳುಕ್ಯರ, ವಲ್ಲವರ ಮತ್ತು ಇತರ ಪಾಳೆಗಾರರ ಇತಿಹಾಸಗಳನ್ನು ತಿರುವಿ ಹಾಕಿದರೆ ಆಗಿನಿಂದಲೂ ಅವರೆಲ್ಲರೂ ಈ ರಾಜ್ಯಕ್ಕೆ ಕರ್ನಾಟಕ ವೆಂಬ ಹೆಸರಿಟ್ಟುಕೊಂಡು ಬಂದಿರುವ ಅಂಶ ತಮಗೆಲ್ಲರಿಗೂ ವೇದ್ಯವಾಗುತ್ತದೆ. ಆಗ ಈ ಕರ್ನಾಟಕ ರಾಜ್ಯಕ್ಕಿದ್ದ ಒಂದು ಸಂಸ್ಕೃತಿ, ಚಾರಿತ್ರಿಕ ಹಿನ್ನೆಲೆ, ಭಾಗೋಳಿಕ ಹಾಗೂ ಜನರ ನಡೆನುಡಿ; ಅವರ ಪದ್ಧತಿ, ಆಗಿದ್ದ ಜನರ ಸ್ಥಿತಿಗತಿಗಳನ್ನು ನಾವು ಆಲೋಚನೆ ಮಾಡಿದರೆ ನಿಜವಾಗಿಯೂ ಅವು ನಮ್ಮೆಲ್ಲರಿಗೂ ಒಂದು ಒಳ್ಳೆ ಭಾವನೆಯನ್ನು ತಂದುಕೊಡುತ್ತವೆ. ಆದರೆ ಆಗಿದ್ದ ಕರ್ನಾಟಕ ರಾಜ್ಯಕ್ಕೆ ಸೇರಿದ್ದ ಕೆಲವು ಪ್ರದೇಶಗಳು ಇನ್ನೂ ಬೇರೆ ಬೇರೆ ರಾಜ್ಯಗಳಲ್ಲೇ ಸೇರಿಕೊಂಡಿರುತ್ತವೆ. ಆದರೆ ಮೊನ್ನೆ ಈ ರಾಜ್ಯಗಳು ಭಾಷೆ ಆಧಾರದಮೇಲೆ ವಿಭಾಗವಾಗುವಾಗ ತಿಳಿದೇನೋ ಅಥವಾ ತಿಳಿಯದೇನೋ ಕೆಲವು ಕರ್ನಾಟಕ ಭಾಗಗಳು ಬೇರೆ ರಾಜ್ಯದಲ್ಲಿ ಇನ್ನೂ ಉಳಿದಿರುತ್ತವೆಂಬ ಅಂಶವನ್ನು ನಾವು ಹಿಂದಿನ ಇತಿಹಾಸ ನೋಡಿದರೆ ಗೊತ್ತಾಗುತ್ತದೆ. ಆ ಭಾಗಗಳನ್ನೂ ನಾವು ಈಗ ಈ ಕರ್ನಾಟಕಕ್ಕೇ ಸೇರಿಸಿಕೊಂಡರೆ ಆ ನಮ್ಮ ಕನ್ನಡಿಗರಿಗೂ ಒಂದು ನೆಮ್ಮದಿ ಆಗುತ್ತೆ. ನಾವು ಆಗ ಒಂದು ಹೊಸ ಸಮಾಜ ನಿರ್ಮಾಣ ಮಾಡುವುದಕ್ಕೆ ತುಂಬಾ ಅನುಕೂಲವಾಗಿ ನಮ್ಮ ರಾಜ್ಯದ ಆರ್ಥಿಕ ಸ್ಥಿತಿ ಮತ್ತಷ್ಟು ಉತ್ತಮವಾಗಲು ಅವಕಾಶವಾಗುತ್ತದೆ. ಈಗೇನು ಮಾತೆತ್ತಿದರೆ ಕೆಲವರು ಸಾತ್ ಕ್ಯಾನರಾ, ಮದ್ರಾಸ್ ಕರ್ನಾಟಕ, ಮುಂಬೈ ಕರ್ನಾಟಕ ಹೈದರಬಾದ್ ಕರ್ನಾಟಕ ಎಂತ ಹೇಳೋ ಪರಿಸ್ಥಿತಿ ಇದೆ ಇದು ಆದಷ್ಟು ಬೇಗ ಹೋಗಬೇಕು. ಇಲ್ಲವಾದರೆ ಜನರೆಲ್ಲರೂ ಒಂದು ಸಾಮರಸ್ಯದಿಂದ ಬಾಳಲು ಅವಕಾಶವಿರುವುದಿಲ್ಲ. ಆದುದರಿಂದ ನಾವು ಈ ಅಸಂಬದ್ಧ ನಡವಳಿಕೆಯನ್ನು ತೊಡೆದು ಹಾಕಿದರೆ ಮುಂದೆ ನಾವೆಲ್ಲರೂ ಅನ್ಯೋನ್ಯತೆಯಿಂದ ಒಡಗೂಡಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಜನರೆಲ್ಲರಲ್ಲೂ ಒಂದು ಮನೋಭಾವನೆ ಬೆಳೆಯಲು ಇದರಿಂದ ಅವಕಾಶವಾಗುತ್ತದೆ.

ಶ್ರೀ ಎಸ್. ಜಿ. ನರೆಸಿಂಹೇಗೌಡ.—ಎರಡು ರಾಜ್ಯಗಳನ್ನು ಮಾಡಿ.

ಶ್ರೀ ಬನಸಗಾಡ.—ಈಗ ಅದು ಅನಾಧ್ಯ ವಿಚಾರ. ಒಂದು ಭಾಷೆಯಿರತಕ್ಕ ರಾಜ್ಯವನ್ನು ಎಲ್ಲಯೂ ಎರಡು ಭಾಗ ಮಾಡಿಲ್ಲ. ಆ ರೀತಿ ಕೊಡುವುದಕ್ಕೂ ಆಗುವುದಿಲ್ಲ. ಈ ವಿಚಾರ ಈಗ ಶಕ್ಯವೇ ಇಲ್ಲ. ಈ ಹಿಂದೆ ಈ ವಿಚಾರಗಳನ್ನೆಲ್ಲ ಕೂಲಂಕುಷವಾಗಿ ವಿಮರ್ಶೆ ಮಾಡಿ ಇದನ್ನು ಹಿಂದೆಯೇ ತೀರ್ಮಾನ ಮಾಡಿದ್ದಾರೆ. ಹಿಂದು ಹೆಸರಿನ ವಿಷಯದಲ್ಲಿ ಅಷ್ಟು ದೀರ್ಘವಾಗಿ ಆಲೋಚನೆ ಮಾಡತಕ್ಕ ಪ್ರಮೇಯವೇನು ಇಲ್ಲ. ಒಂದು ಹೊಸರಾಜ್ಯಕ್ಕೆ ಒಂದು ಹೊಸ ಹೆಸರನ್ನಿಡುವುದು ಸ್ವಾಭಾವಿಕವಾಗೇ ಇದೆ. ಆದ್ದರಿಂದ ನಾನೀಗ ಮುಖ್ಯವಾಗಿ ಹೇಳೇ ಮೈನೂರಿನಲ್ಲಿ ಏನಂತಿ ಮಾಡಿಕೊಳ್ಳುವುದೇನೆಂದರೆ—ತಾವೆಲ್ಲರೂ ಆ ಹಿಂದಿನ ಒಂದು ಮನೋಭಾವನೆಯನ್ನು ಬದರಾಯಿಸಿ ನಾವು ಒಳಗಿನವರು—ಇವರು ಹೊರಗಿನವರು ಎಂಬ ಭಿನ್ನ ಭಾವನೆ ಮಾಡಬಾರದು. ಅದು ಸರಿಯಲ್ಲ. ಇದರಲ್ಲಿ ಯಾರೂ ಹೊರಗಿನವರು ಬಂದಿಲ್ಲ ಮತ್ತು ಯಾರು ಯಾರನ್ನು ಸ್ವೀಕರಿಸಿಕೊಂಡಿಲ್ಲ. ಹೀಗೆ ಇಂಥ ಒಂದು ಉದಾತ್ತ ಧ್ಯೇಯವನ್ನು ಆಚರಣೆಗೆ ತರತಕ್ಕ ಕಾಲದಲ್ಲಿ ಒಬ್ಬರನ್ನೊಬ್ಬರು ಅಲ್ಲಗಳೆಯುತಾ ಹೋದರೆ ಇವಕ್ಕೆಲ್ಲ ಪಾರೆಲ್ಲಿದೆ ? ಇಷ್ಟಕ್ಕೆಲ್ಲ ಯಾರೂ ವ್ಯಥಾ ವೈಷಮ್ಯಗಳನ್ನು ಬೆಳೆಸಲು ಹೊರಡುವುದು ಯುಕ್ತವಾದ್ದಲ್ಲ. ನಾವೆಲ್ಲರೂ ಒಗ್ಗಾತ್ಮಗೋಣ ! ದೇಶಾಭ್ಯುದಯಕ್ಕೆ ದುಡಿಯೋಣ. ನಮ್ಮ ಹೊಸ ರಾಜ್ಯದ ಪ್ರಗತಿಗೆ ಒಗ್ಗಟ್ಟು ಅತಿಮುಖ್ಯ. ಇದರಿಂದ ಜನರಿಗೆಲ್ಲ ಒಳ್ಳೇದಾಗುತ್ತೆ, ನಮ್ಮಲ್ಲಿ ಚರೋಭಾವನೆ ಬೆಳೆಯುತ್ತವೆ. ಆದಕ್ಕೆ ನಾವೆಲ್ಲರೂ ಈಗಿರತಕ್ಕ ನಮ್ಮ ಮನೋಭಾವನೆಯನ್ನು ಸ್ವಲ್ಪಮಟ್ಟಿಗೆ ಬದರಾಯಿಸಿಕೊಳ್ಳಬೇಕೆಂದು ತಮ್ಮೆಲ್ಲರಲ್ಲೂ ವಿನಂತಿ ಮಾಡಿಕೊಳ್ಳುತ್ತೇನೆ. ತಾವೆಲ್ಲರೂ ಏಕ ಕಂಠದಿಂದ ಈ ನಿರ್ಣಯವನ್ನು ಒಪ್ಪಿ ಕೊಳ್ಳಬೇಕೆಂದು ಕೇಳುತ್ತೇನೆ. ಇಂಥ ಒಂದು ಒಳ್ಳೆಯ ಕೆಲಸವನ್ನು ಮಾಡುವ ಕಾಲದಲ್ಲಿ ತಾವೆಲ್ಲರೂ ಶಾಂತ ರೀತಿಯಿಂದ, ವಿಶಾಲಭಾವನೆಯಿಂದ ಈ ಪ್ರಶ್ನೆಯನು ಪರಿಶೀಲಿಸಿ ಎಲ್ಲರೂ ತೊಡ್ಡ ಮನಸ್ಸುಮಾಡಿ ಒಂದು ಚರೋ ವಾತಾವರಣವನ್ನು ಕಲ್ಪಿಸಿ ಇದನ್ನು ಒಪ್ಪಿಕೊಳ್ಳುವಂತೆ ಮಾಡತಕ್ಕದ್ದು ನಮ್ಮೆಲ್ಲರ ಆಧ್ಯ ಕರ್ತವ್ಯವಾಗಿದೆ. ನಾನೀಗ ಸಭೆಯಮುಂದೆ ಮುಂದಿನಲರುವ ಗೊತ್ತುವಳಿಯ ಬಗ್ಗೆ ಹಿಂದೆಲ್ಲಾ ಜೇಕಾದಷ್ಟು ಚರ್ಚೆಗಳಾಗಿದೆ, ಎಡರು—ತೊಡರುಗಳಿವೆ ಎಂಬುದೆಲ್ಲಾ ಈಗಾಗಲೇ ಎಲ್ಲರಿಗೂ ಗೊತ್ತಾಗಿರುತ್ತೆ. ಹೊಸರಾಜ್ಯ ಉದಯವಾಗಿ ಇಲ್ಲಿಗೆ 4 ವರ್ಷಗಳಮೇಲಾಯಿತು. ನಾವು ಈ ಒಂದು ಪ್ರಶ್ನೆಯನ್ನು ಇಲ್ಲಯತನಕ ಬಗೆಹರಿಸಲಾಗಲಿಲ್ಲ ಎಂದರೆ ನಾಳೆ ದೇಶದಲ್ಲಿರತಕ್ಕ ಜನರಲ್ಲಿ ಒಂದು ತಪ್ಪುಭಾವನೆಗೆ ಬರಲು ಅವಕಾಶ ಮಾಡಿಕೊಟ್ಟ ಹಾಗಾಗುತ್ತದೆ. ಮುಂದಿನ ಚುನಾವಣೆಗಳಲ್ಲಿ ಈ ಪ್ರಶ್ನೆಯನ್ನ ಜನರು ಎತ್ತುವ ಸಂಭವವೂ ಇರುತ್ತೆ. ಈ ದಿವಸ ನಾವು ಈ ಗೊತ್ತುವಳಿ ಪಾಸ್ ಮಾಡಿದರೆ ನಾಳೆ ನಾವು ಜನರ ಮುಂದೆ ಹೇಳಿ ಅವರ ಓಟನ್ನು ಕೇಳಲು ಇದರಿಂದ ಅನುಕೂಲವಾಗುತ್ತದೆ ಎಂದು ಹೇಳುತ್ತೇನೆ.

Mr. DEPUTY SPEAKER.—The House will now adjourn and meet tomorrow at 1 P. M.

The House adjourned at Six of the Clock to meet again at One of the Clock on Wednesday, 26th April, 1961.

WD 6593—GPB—500—(L.A. New)—18-2-67